8. Most Rev. Dr. V.P. Dandin ITI, Dharwad
9. Vikas ITI, Dharwad
10. Ashrapee ITC, Hubli.
11. Multitek ITC, Dharwad.
12. Nargund Taluk Rural Education Societies ITI, Nargund.
13. Malenadu Educationl ITI, Nigadhi, Dharwad Dist.
14. D.M.W.E. Society ITI, Hukkeri.
15. Lingayath Education Association Avvappanna
16. Saint Anotony ITI, Hubli
17. Anjuman Islam ITI, Dharwad.
18. Sadguru Seva Rural ITI, Akki Aluru
19. Sri Guru Gorakshanatha ITI, Hubli
20. Sri Guru Siddeshwara Vidya Vardhaka Sangha ITI, Haveri.

...

297 (539) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗುಟಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಎಸ್‌ಸಿ:ಎಸ್‌ಟಿ ಹಾಗೂ ಬಿಸಿಎಂ ಫಲಾನುಭವಿಗಳಿಗೆ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಿಸಿ ಕೊಡಲಾಗಿದೆ. (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಇದಕ್ಕಾಗಿ ಕಲಘಟಗಿಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿತ್ತು ಹಾಗೂ ಎಷ್ಟು ಜನರಿಗೆ ಗಂಗಾಕಲ್ಯಾಣ ಯೋಜನೆಯ ಲಾಭ ಪಡೆದು ಕೊಳವೆ ಬಾವಿ ನಿರ್ಮಿಸಿಕೊಡಲಾಗಿತ್ತು.

ಇ) ಇವುಗಳಲ್ಲಿ ಪೂರ್ಣಗೊಂಡ ಮತ್ತು ಅಪೂರ್ಣಗೊಂಡಿರುವವೆಷ್ಟು;

ಈ) ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ;

ಉ) ಈ ಪೈಕಿ ಕೊಳವೆ ಬಾವಿ ಕೊರೆಸಿ ವಿದ್ಯುತ್ ಸಂಪರ್ಕವಿಲ್ಲದೆ ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ತಿಳಿಸುವುದು)?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು)

ಅ) ಧಾರವಾಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಕೆಳಕಂಡಂತಿದೆ.

| ನಿಗಮದ ಹೆಸರು | ಕೊಳವೆ ಬಾವಿಗಳ ಸಂಖ್ಯೆ |
|---|---|
| 1. ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ | 140 |

| | | |
|---|---|---|
| 2. | ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 59 |
| 3. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | 61 |

ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಗಂಗ ಕಲ್ಯಾಣ ಯೋಜನೆಯಡಿಯಲ್ಲಿ 96 ಫಲಾನುಭವಿಗಳನ್ನು ಗುರುತಿಸಿದ್ದು, 87 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಿಕೊಡಲಾಗಿದೆ.

ಇ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದ ವತಿಯಿಂದ ಕೊರೆಯಲಾದ 60 ಕೊಳವೆ ಬಾವಿಗಳ ಪೈಕಿ 25 ಕೊಳವೆ ಬಾವಿಗಳು ಪೂರ್ಣಗೊಂಡಿದ್ದು, ಇನ್ನೂ 35 ಕೋಟಿ ಕೊಳವೆ ಬಾವಿಗಳು ಪೂರ್ಣಗೊಳ್ಳಬೇಕಾಗಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಕೊರೆಯಲಾದ 13 ಕೊಳವೆ ಬಾವಿಗಳ ಪೈಕಿ 11 ಕೊಳವೆ ಬಾವಿಗಳು ಪೂರ್ಣಗೊಂಡಿದೆ 2 ಕೊಳವೆ ಬಾವಿಗಳು ಅಪೂರ್ಣವಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೊರೆಯಲಾದ ಎಲ್ಲಾ 12 ಕೊಳವೆ ಬಾವಿಗಳು ಪೂರ್ಣಗೊಂಡಿರುತ್ತದೆ.

ಈ) ತುರ್ತಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಉ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದ ವತಿಯಿಂದ ಕೊರೆಯಲಾದ 60 ಕೊಳವೆ ಬಾವಿಗಳ ಪೈಕಿ 25 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು ಇನ್ನುಳಿದ 35 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ. ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಎಲ್ಲಾ ಕೊಳವೆ ಬಾವಿಗಳನ್ನು ನೊಂದಾಯಿಸಲಾಗಿದೆ. ವಿದ್ಯುದ್ದೀಕರಣ ಬಾಕಿ ಇದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಎಲ್ಲಾ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಎಲ್ಲಾ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ. ಅವುಗಳ ಪೈಕಿ ಎರಡರಲ್ಲಿ ಪಂಪುಸೆಟ್ ಒದಗಿಸಬೇಕಾಗಿದೆ.

## ಅನುಬಂಧ

**ಧಾರವಾಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ತಾಲ್ಲೂಕುವಾರು ವಿವರ**

| ತಾಲ್ಲೂಕು | | ಕೊರೆದ ಬಾವಿಗಳ ಸಂಖ್ಯೆ | | | | | |
|---|---|---|---|---|---|---|---|
| | | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ | | ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | | ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | |
| 1. ಧಾರವಾಡ | | ವೈಯಕ್ತಿಕ ಕೊಳವೆ ಬಾವಿ ಗಳ ಸಂಖ್ಯೆ | ಸಾಮೂಹಿಕ ಕೊಳವೆ ಬಾವಿ ಗಳ ಸಂಖ್ಯೆ | ವೈಯಕ್ತಿಕ ಕೊಳವೆ ಬಾವಿ ಗಳ ಸಂಖ್ಯೆ | ಸಾಮೂಹಿಕ ಕೊಳವೆ ಬಾವಿ ಗಳ ಸಂಖ್ಯೆ | ವೈಯಕ್ತಕ ಕೊಳವೆ ಬಾವಿ ಗಳ ಸಂಖ್ಯೆ | ಸಾಮೂಹಿಕ ಕೊಳವೆ ಬಾವಿ ಗಳ ಸಂಖ್ಯೆ |
| 1. | ಧಾರವಾಡ | 43 | 4 | 16 | 07 | 21 | – |
| 2. | ಹುಬ್ಬಳ್ಳಿ | 9 | 4 | 10 | – | 12 | – |
| 3. | ಕಲಘಟಗಿ | 55 | 5 | 5 | 08 | 12 | – |
| 4. | ಕುಂದಗೋಳ | 19 | – | 5 | 02 | 10 | – |
| 5. | ನವಲಗುಂದ | 01 | – | 6 | – | 06 | – |
| | ಒಟ್ಟು | **127** | **13** | **42** | **17** | **61** | – |